

ಸಾಗರದಂಚಲ್ಲಿ ಆಲೀವ್ ರಿಡ್ಲೆ



ತೀರದ ಮರಳ ಒಡಲಿನಿಂದ ಕಡಲ ಒಡಲು ಸೇರುವ ಕಡಲಾಮೆ ಮರಿಗಳಿಗೆ ಮನುಷ್ಯಜನ್ಯ ಪ್ಲಾಸ್ಟಿಕ್–ಕಸಗಳು ಕಂಟಕವಾಗಿ ಪರಿಣಮಿಸುತ್ತವೆ.

ಸುಳ್ಳುಗುಂಡಿಗಳ ಚಿತ್ರಕ್ಕಾಗಿ ತಮ್ಮ ಮೊಬೈಲನ್ನು ಉಜ್ಜುತ್ತಾರೆ. ಕಳ್ಳಕಾಕರ ದಾರಿ ತಪ್ಪಿಸುವ ತಂತ್ರ ಇದಂತೆ. ಹಾವು, ಹಂದಿ, ಉಡ, ಚಿರತೆ, ನಾಯಿಗಳು ಆಮೆಯ ಮೈವಾಸನೆಯನ್ನೇ ಆಧರಿಸಿ ಮೊಟ್ಟೆಗೂಡನ್ನು ಕೆದಕುತ್ತವೆ. ಅವಕ್ಕೆ ಚಳ್ಳೆಹಣ್ಣು ತಿನ್ನಿಸಲೆಂದೇ ಕೆಲವು ಆಮೆಗಳು ಅಲ್ಲಲ್ಲೇ ಅಂಡಲೆದು, ಸುಳ್ಳುಗುಂಡಿ ಮುಚ್ಚಿ, ಹೆಜ್ಜೆ ಗುರುತನ್ನೂ ಕೆಲಮಟ್ಟಿಗೆ ಮುಚ್ಚಿ ಕಡಲನ್ನು ಸೇರುತ್ತವೆ, ತನ್ನ ಸಂತಾನದ ಗತಿ ಏನಾಯಿತೆಂದು ತಿರುಗಿಯೂ ನೋಡದೆ.

ಆಮೆ ಮೇಲೆದ್ದು ಬಂದಿದ್ದು, ಮೊಟ್ಟೆ ಇಡಲು ಸದ್ದಿಲ್ಲದೆ ಗುಂಡಿ ತೋಡಿದ್ದು ಎಲ್ಲವೂ ಮೀನುಗಾರರಿಗೆ ರಾತ್ರಿಯೇ ಗೊತ್ತಾಗಿರುತ್ತದೆ. ಆಮೆಯ ಪಕ್ಕೆರೆಕ್ಕೆಯ ಗುರುತು ಅದೆಷ್ಟೇ ಗೊಂದಲಕಾರಿ ಇದ್ದರೂ ಬೆಳಗಿನಲ್ಲಂತೂ ಇಂಥದ್ದೇ ಸ್ಥಳದಲ್ಲೇ ಮೊಟ್ಟೆ ಇಟ್ಟಿದೆ ಅನ್ನೋದನ್ನು ಅವರು ನಿಖರವಾಗಿ ಹೇಳುತ್ತಾರೆ. ಹಿಂದೆಲ್ಲ ಮಾಂಸಕ್ಕಾಗಿ ಅಪರೂಪಕ್ಕೆ ಕೆಲವರು ಆಮೆಯ ಬೇಟೆಗೆ ಬರುತ್ತಿದ್ದರು. ಬೇಟೆ ಎಂದರೇನು, ತೀರ ಸುಲಭ: ಪಲ್ಟಿ ಹೊಡೆಸಿದರೆ ಆಯಿತು. (ಚಿರತೆ ಉಡಗಳು ದಾಳಿ ಮಾಡಿದರೆ ಈ ಪಾಪದ ಪ್ರಾಣಿಗೆ ಯಾವ ರಕ್ಷಣೆಯೂ ಇಲ್ಲ. ಕತ್ತನ್ನು ಹಿಂದಕ್ಕೆ ಜರುಗಿಸಿ ಕವಚದ ಒಳಗೆ ತಲೆ ಹುದುಗಿಸಲೂ ಇವಕ್ಕೆ ಸಾಧ್ಯವಿಲ್ಲ. ಭೂಮಿಯ ಮೇಲೆ ವಾಸಿಸುವ ಆಮೆಗಳಿಗೆ ಮಾತ್ರ ಆ ಸೌಲಭ್ಯ ಇದೆ. ಕಡಲಾಮೆಯ ಕತ್ತನ್ನು ತಿಂದು ಚಿಂದಿ ಮಾಡಿದ ಚಿರತೆಗೆ, ಅದೆಷ್ಟೇ ಯತ್ನಿಸಿದರೂ ಅದರ ಕವಚವನ್ನು ಭೇದಿಸಿ ಮಾಂಸ ಭಕ್ಷಣೆ ಮಾಡಲೂ ಸಾಧ್ಯವಿಲ್ಲ. ಹದ್ದು–ಕಾಗೆಗಳಿಗೂ ಅದು ಸಾಧ್ಯವಿಲ್ಲ. ಅಷ್ಟೂ ಮಾಂಸ ನೊಣ ಇರುವೆಗಳ ಪಾಲಾಗಬೇಕು ಅಷ್ಟೆ.) ಮನುಷ್ಯರು ಹಿಂದೆಲ್ಲ ಕಷ್ಟಪಟ್ಟು ಮಾಂಸವನ್ನು ಕೆರೆಸಿ ತೆಗೆದು ಅಡುಗೆಗೆ ಬಳಸುತ್ತಿದ್ದರು. ಆದರೆ ಅದೇನೂ ಅಷ್ಟು ರುಚಿಕರ ಮಾಂಸ ಅಲ್ಲ; ಮೊಟ್ಟೆಗಳಾದರೆ ಅದರ ಕತೆ ಬೇರೆ.

## ಮೊಟ್ಟೆ ರಕ್ಷಣೆಗೆ ಬೇಲಿಗೂಟಗಳ ಸಾಕ್ಷಿ

ಕಡಲಾಮೆಗಳು, ಅದರಲ್ಲೂ ತೆಳು ಹಸಿರು ಬಣ್ಣದ ಈ 'ಆಲಿವ್ ರಿಡ್ಲೆ'(Olive Ridley)ಗಳು ವಿನಾಶದ ಅಂಚಿಗೆ ಬಂದಿರುವುದರಿಂದ, ಅವುಗಳನ್ನು ಬೇಟೆಯಾಡಿದವರಿಗೆ ಉಗ್ರ ಶಿಕ್ಷೆ ವಿಧಿಸುವ ಕಾನೂನುಗಳು ಬಂದಿವೆ. ಇದರಿಂದ ಆಮೆ ಮತ್ತು ಮೊಟ್ಟೆಗಳಿಗೆ ಮನುಷ್ಯರಿಂದ ತಕ್ಕಮಟ್ಟಿಗೆ ರಕ್ಷಣೆ ಸಿಕ್ಕಂತಾಗಿದೆ. ನಾಯಿನರಿಗಳು ಮೊಟ್ಟೆಗಳನ್ನು ಕೆದಕದಂತೆ ಈಚಿನ ಕೆಲವು ವರ್ಷಗಳಲ್ಲಿ ಗೂಡುಗಳಿಗೂ ರಕ್ಷಣೆ ತಕ್ಕಮಟ್ಟಿಗೆ ಸಿಗುತ್ತಿದೆ. ಹೊನ್ನಾವರದ

### ಕಾಸರಕೋಡು ಕಡಲಿನಲ್ಲಿ ಕಂಡುಬರುವ ಪ್ರಮುಖ ವಿಶಿಷ್ಟ ಜೀವಿಗಳು

- ಸ್ಪಿನ್ನರ್ ಡಾಲ್ಫಿನ್
- ಬಾಟಲಿ ಮೂತಿಯ ಡಾಲ್ಫಿನ್
- ಬ್ರೈಡ್ಸ್ ತಿಮಿಂಗಲ
- ಚುಕ್ಕಿಬಾಲದ ಶಾರ್ಕ್
- ಬಿಳಿಮೂತಿಯ ಶಾರ್ಕ್
- ಬಿಳಿಕೆನ್ನೆಯ ಶಾರ್ಕ್
- ಆಲಿವ್ ರಿಡ್ಲೆ



ಮರಳಲ್ಲಿ ಗುಂಡಿ ತೋಡಿ ಮೊಟ್ಟೆ ಇಟ್ಟಿರುವ ಕಡಲಾಮೆ